
## ಬೆಳಕಿನ ಹಾದಿ

# ವ್ಯವಹಾರ ಜ್ಞಾನ ಇಲ್ಲದ ಪದವಿ ವ್ಯರ್ಥ

■ ಜಯಶ್ರೀ ಎಂ.ಕೆ., ಹುಬ್ಬಳ್ಳಿ



ನಾಲ್ಕಾರು ಯುವಕರ ಗುಂಪೊಂದು ಹೋಟೆಲ್‌ಗೆ ಕಾಲಿಟ್ಟಿತು. ಹೋಟೆಲ್ ಒಳಗೆ ಹೆಚ್ಚು ಜನ ಇದ್ದರು. ಅಲ್ಲಿ ಇಲ್ಲಿ ಹುಡುಕಿ ಒಂದು ಖಾಲಿ ಮೇಜಿಗೆ ಕುಳಿತರು. ಸ್ವಲ್ಪ ಸಮಯ ಕಳೆಯಿತು. ಹೋಟೆಲ್‌ನಲ್ಲಿ ಹೆಚ್ಚು ಜನ ಇದ್ದುದರಿಂದ ತಕ್ಷಣವೇ ಮಾಣಿಗಳು ಇವರ ಟೇಬಲ್‌ಗೆ ಬರಲಿಲ್ಲ. ಯುವಕರು ಸಹನೆ ಕಳೆದುಕೊಂಡರು. ಕೂಗಾಡಿದರು. ಅವರಲ್ಲೊಬ್ಬ ಯುವಕ ಮೇಜಿನ ಮೇಲೆ ಬಲವಾಗಿ ಗುದ್ದಿ ತನ್ನ ಪೌರಷ ತೋರಿಸಿದ. ಆಗ ಹೋಟೆಲ್‌ನಲ್ಲಿದ್ದ ಎಲ್ಲರೂ ಆ ಗುಂಪಿನತ್ತ ನೋಡತೊಡಗಿದರು. ಯುವಕರ ಆರ್ಭಟ ಕಂಡು ಅಲ್ಲಿದ್ದ ಎಲ್ಲರೂ ಬೆರಗಾದರು.

ಕ್ಯಾಷ್ ಕೌಂಟರ್‌ನಲ್ಲಿ ಕುಳಿತಿದ್ದ ಮಾಲಿಕ ಇದೆಲ್ಲವನ್ನೂ ನೋಡುತ್ತಿದ್ದ. ಯುವಕ ಟೇಬಲ್ ಗುದ್ದದ ಸದ್ದಿಗೆ ಬೆದರಿದ ಮಾಲಿಕ ಕೂಡಲೇ ಆ ಟೇಬಲ್ ಬಳಿ ಬಂದು ನಿಂತ. ತಡವಾದುದಕ್ಕೆ ಕ್ಷಮೆ ಕೇಳಿದ. ನಂತರ ಅವರ ಆರ್ಡರ್ ಪಡೆದುಕೊಂಡು ಅದನ್ನು ಸಪ್ಲೈ ಮಾಡಿದರು. ಅದೇ ಸಮಯದಲ್ಲಿ ಇನ್ನೊಂದು ಟೇಬಲ್‌ನಲ್ಲಿ ಒಂದು ಕುಟುಂಬದ ನಾಲ್ಕು ಜನರಿದ್ದರು. ಅದರಲ್ಲೊಬ್ಬ ತನ್ನ ತೊರುಬೆರಳನ್ನು ಎತ್ತಿ 'ಕ್ಷಮಿಸಿ! ಒಂದು ನಿಮಿಷ ಬನ್ನಿ ಇಲ್ಲಿ' ಎಂದು ಮಾಣಿಯನ್ನು ಕರೆದ. ಮಾಣಿ ನಮ್ರತೆಯಿಂದ ಬಂದು ಅವರ ಆರ್ಡರ್ ಬರೆದುಕೊಂಡು ಹೋದ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಯುವಕರ ಗುಂಪಿನವರೆಲ್ಲರೂ ವಿದ್ಯಾವಂತರೆ ಆಗಿದ್ದರು. ಆದರೆ ಅವರಿಗೆ ತಾಳ್ಮೆಯಾಗಲಿ, ಪರಿಸ್ಥಿತಿಯ ಅರಿವಾಗಲಿ ಇರಲಿಲ್ಲ. ಕನಿಷ್ಟವಾಗಿ ಅವರಿಗೆ ವ್ಯವಹಾರ ಜ್ಞಾನವಾಗಲಿ ಇರಲಿಲ್ಲ. ವ್ಯವಹಾರ ಜ್ಞಾನವಿದ್ದಿದ್ದರೆ, ತಾಳ್ಮೆ, ಸಹನೆ ಮುಂತಾದವು ಸಂದರ್ಭಕ್ಕೆ ತಕ್ಕಂತೆ ತನಗೆ ತಾನೇ ಪ್ರಕಟಗೊಳ್ಳುತ್ತಿದ್ದವು.



ನಮ್ಮ ನಿತ್ಯ ಜೀವನದಲ್ಲಿ ಎದುರಾಗುವ ಸನ್ನಿವೇಶಗಳಲ್ಲಿ ವ್ಯವಹಾರ ಜ್ಞಾನ ಬಹಳ ಮುಖ್ಯ. ಈ ವ್ಯವಹಾರ ಜ್ಞಾನವನ್ನು ಯಾವ ಶಾಲೆ ಕಾಲೇಜುಗಳು ಕಲಿಸುವುದಿಲ್ಲ. ಅನುಭವದ ಪಾಠದಿಂದ ಮಾತ್ರ ಅದನ್ನು ಕಲಿಯಲು ಸಾಧ್ಯ. ವ್ಯವಹಾರ ಜ್ಞಾನವಿಲ್ಲದೇ ಸ್ನಾತಕ ಪದವಿ, ಸ್ನಾತಕೋತ್ತರ ಪದವಿ ಪಡೆದರೂ ವ್ಯರ್ಥವೇ.

ಮಾನವರಾದ ನಾವು ಸಂಘಜೀವಿಗಳು. ಜನರೊಂದಿಗೆ ಇರುವಾಗ ನಮ್ಮ ನಡೆ ನುಡಿಗಳನ್ನು ಜನಪರವಾಗಿ ಬದಲಾಯಿಸಿಕೊಳ್ಳಬೇಕಾದುದು ಇಂದಿನ ಅಗತ್ಯವಾಗಿದೆ. ನಮ್ಮಲ್ಲಿನ ಕೋಪ, ಅಸಹನೆ ಬದಿಗಿಟ್ಟು, ಪ್ರೀತಿಯಿಂದ ಮಾತನಾಡುವ ಕೌಶಲ್ಯ ಬೆಳೆಸಿಕೊಳ್ಳಬೇಕಿದೆ. ಇದು ವ್ಯವಹಾರ ಜ್ಞಾನವಿರುವವರ ಲಕ್ಷಣ. ಜೀವನದಲ್ಲಿ ಯಶಸ್ಸು ಗಳಿಸಲು ವ್ಯವಹಾರ ಜ್ಞಾನ ಅತಿಮುಖ್ಯ. ತಮ್ಮ ವ್ಯವಹಾರ ಜ್ಞಾನದಿಂದ ಜೀವನದಲ್ಲಿ ಯಶಸ್ಸು ಕಂಡ ಅನೇಕ ದಾರ್ಶನಿಕರ ಜೀವನ ನಮಗೆ ಮಾದರಿಯಾಗಲಿ. ಜೀವನದಲ್ಲಿ ಯಶಸ್ಸುಗಳಿಸಲು ಅತ್ಯುತ್ತಮ ವ್ಯವಹಾರ ಜ್ಞಾನ ಮತ್ತು ಪರಿಸ್ಥಿತಿಗಳು, ಘಟನೆಗಳು, ಇವುಗಳ ಬಗ್ಗೆ ಸ್ಪಷ್ಟವಾದ ಅರಿವು ಇರಬೇಕು. ಅವುಗಳನ್ನು ನಿಭಾಯಿಸುವ ಸಾಮರ್ಥ್ಯ ಇರಬೇಕು.

ವಿದ್ಯಾಭ್ಯಾಸದಿಂದ ನಮಗೆ ಜ್ಞಾನಾರ್ಜನೆಯಾಗುತ್ತದೆ, ಕೆಲಸ ಸಿಗುತ್ತದೆ, ಆದರೆ ಜೀವನದಲ್ಲಿ ಯಶಸ್ಸು ಸಿಗಲು ವ್ಯವಹಾರ ಜ್ಞಾನ ಅತಿ ಮುಖ್ಯ. ನಾವು ಗಳಿಸಿದ ಜ್ಞಾನವನ್ನು ಜೀವನಕ್ಕೆ ಅಳವಡಿಸಿಕೊಳ್ಳತೊಡಗಿದಾಗ ನಮಗೆ ಬುದ್ಧಿವಂತಿಕೆ ಉಂಟಾಗುತ್ತದೆ. ಬುದ್ಧಿವಂತಿಕೆ ಸಹ ಕೆಲಬಾರಿ ಸಾಮಾನ್ಯ ಜ್ಞಾನದಂತೆ ಕೆಲಸ ಮಾಡುತ್ತದೆ. ವ್ಯವಹಾರ ಜ್ಞಾನ ಬೆಳೆಸಿಕೊಂಡು ಸಂತಸದ ಜೀವನ ನಡೆಸೋಣ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:

Contact for
EVENT COVERAGE
& Advertisements
in Leading
Hampi Times local
Daily News Paper
M: 94486 33038

# ತಿರುಮಲೇಶರ ಪುಟ್ಟ... ದಿಟ್ಟನಾಗುವ ಪ್ರಯತ್ನ

ಮಕ್ಕಳ ಪರೀಕ್ಷೆಗಳು ಮುಗಿದು ರಜಾ ಖುಷಿಯನ್ನು ಅನುಭವಿಸುತ್ತಿದ್ದಾರೆ. ರಜೆಯಲ್ಲಿ ಮಕ್ಕಳಿಗೆ ಓದಿನ ರುಚಿ ಹತ್ತಿಸುವುದು ದೊಡ್ಡವರ ಜವಾಬ್ದಾರಿಯಾಗಿದೆ. ಓದು ಮಕ್ಕಳ ಬದುಕಿಗೆ ಮನೋರಂಜನೆ ಹಾಗೂ ಹೊಸ ವಿಷಯಗಳ ಜೊತೆಗೆ ಮತ್ತು ಸ್ಫೂರ್ತಿಯನ್ನು ನೀಡುವಂತಾದರೆ ಅದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೆಲವು ಮಹತ್ತರ ಪುಸ್ತಕಗಳನ್ನು ಪರಿಚಯಿಸುವ ಆಶಯದಲ್ಲಿ ಮುಂದುವರೆದ ಭಾಗವಾಗಿ ಈ ಲೇಖನ.

ಕನ್ನಡದ ವಿಶಿಷ್ಟ ಕವಿಯಾಗಿ, ಚಿಂತಕರಾಗಿ, ವಿದ್ವಾಂಸರಾಗಿ ಅಲ್ಲದೇ ಭಾಷಾ ಶಾಸ್ತ್ರಜ್ಞರಾಗಿ ಮನ್ನಣೆ ಪಡೆದಿದ್ದ ಕೆ.ವಿ.ತಿರುಮಲೇಶರು ಕನ್ನಡಕ್ಕೆ ನೀಡಿದ ಕೊಡುಗೆಗಳು ಒಂದೆರಡಲ್ಲ. ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಯಲ್ಲಿ ಪರಿಣತಿಯನ್ನು ಪಡೆದು, ತಮ್ಮ ಜ್ಞಾನವನ್ನು 60ಕ್ಕೂ ಹೆಚ್ಚು ಕೃತಿಗಳಲ್ಲಿ ಹರುಹಿದ್ದಾರೆ. 1990ರ ದಶಕದಿಂದ ನಿರಂತರ ಬರವಣಿಗೆಯಲ್ಲಿತೊಡಗಿಕೊಂಡ ಕ್ರಿಯಾಶೀಲ, ಸಂವೇದನಾಶೀಲ ವ್ಯಕ್ತಿತ್ವ ಅವರದ್ದು. ಕಾವ್ಯ ಅವರ ಪ್ರಧಾನ ಆಸಕ್ತಿ. ಆದರೆ ಒಂದೇ ಬಗೆಗೆ ಜೋತು ಬೀಳದೆ ಪ್ರಯೋಗಶೀಲ ಮನೋಧರ್ಮವನ್ನು ಬದುಕಿನುದ್ದಕ್ಕೂ ವಿಸ್ತಾರಗೊಳಿಸಿದವರು.

ಕಾವ್ಯ, ಕಥೆ, ಕಾದಂಬರಿ, ಭಾಷಾಂತರ, ವೈಚಾರಿಕ ಬರಹಗಳು, ನಾಟಕ, ಅಂಕಣ ಬರಹಗಳು, ವಿಮರ್ಶೆ, ಮಕ್ಕಳ ಸಾಹಿತ್ಯಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಹಲವು ಮೌಲಿಕ ಕೃತಿಗಳನ್ನು ನೀಡಿದ್ದಾರೆ. ಬಹಳ ಮುಖ್ಯವಾಗಿ ಅವರ ಬರಹಗಳಲ್ಲಿನ ಅಥವಾ ಚಿಂತನೆಯ ಮೂಲವು ವಸ್ತು, ವಿಚಾರ ಅಥವಾ ವ್ಯಕ್ತಿ ಎನ್ನುವಂತೆ ಎಲ್ಲವೂ ಸಾಮಾನ್ಯವಾಗಿದ್ದರೂ ಅದನ್ನು ಅಸಾಮಾನ್ಯವಾಗಿಸುವಂತಹ ಅನುಭವಗಳನ್ನು ಸಾಹಿತ್ಯದ ಕೃತಿಗಳಲ್ಲಿ ಅವರು ಕಟ್ಟಿಕೊಟ್ಟಿದ್ದಾರೆ. ಅವರು ಬಹಳ ವಿಶೇಷ ಎನಿಸುವುದು ತಮ್ಮ ಜೀವಿತದ ಕೊನೆಯ ಕಾಲಘಟ್ಟದಲ್ಲಿ ಮಕ್ಕಳಿಗಾಗಿ ಸಾಹಿತ್ಯ ರಚನೆ ಮಾಡಿದುದು. ಕೆಲವೇ ವರ್ಷಗಳಲ್ಲಿ ಹತ್ತಕ್ಕೂ ಹೆಚ್ಚು ಮಕ್ಕಳ ಕೃತಿಗಳನ್ನು ರಚಿಸಿ ಎಲ್ಲರೂ ಹುಬ್ಬೇರುವಂತೆ ಮಾಡಿದ್ದು ಅಚ್ಚರಿಯ ಸಂಗತಿ.

ಕನ್ನಡ ಸಾಹಿತ್ಯವನ್ನು ಗಮನಿಸಿದಾಗ ಇತ್ತೀಚಿನ ದಿನಗಳಲ್ಲಿ ಪ್ರಸಿದ್ಧರೆನಿಸಿದ ಕವಿಗಳು ಮಕ್ಕಳ ಸಾಹಿತ್ಯದತ್ತ ಹೊರಳಿ ನೋಡಿದ್ದು ತುಂಬಾ ಅಪರೂಪ. ಅಂತಹುದರಲ್ಲಿ ದೇಶದ ಮತ್ತು ವಿದೇಶದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿ, ಹಿರಿಯರಿಗೆ ಸಾಕಷ್ಟು ವೈಚಾರಿಕ ಪ್ರಜ್ಞೆ ಬಿತ್ತುವಂತ ಕೃತಿಗಳನ್ನು ರಚಿಸಿದವರು. ನಿರ್ಲಕ್ಷಿತ ವಲಯವಾಗಿರುವ ಮಕ್ಕಳ ಸಾಹಿತ್ಯದಲ್ಲಿ ತಮ್ಮನ್ನು ಒಮ್ಮೆಲೆ ತೊಡಗಿಸಿಕೊಂಡಿದ್ದು ಸೋಜಿಗ ಎನಿಸುತ್ತದೆ.

ಅದಕ್ಕೆ ಅವರು ಅಯೋವಾ ವಿಶ್ವವಿದ್ಯಾಲಯದಲ್ಲಿನ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವ ಅವಧಿಯಲ್ಲಿ ಎದುರಾದ ಸನ್ನಿವೇಶಗಳು ಮತ್ತು ಆ ಸಮಯದಲ್ಲಿ ಅವರಿಗೆ ತೋಚಿರುವುದನ್ನೆಲ್ಲಾ ಬರೆಯಲು ಪ್ರಯತ್ನಿಸಿದ್ದಾರೆ. ಇದು ಒಂದು ರೀತಿ ಕನ್ನಡದಲ್ಲಿ ಜಿ.ಪಿ.ರಾಜರತ್ನಂ ಅವರ ಪ್ರವೇಶಿಕೆ ಹೊಸ ಅಲೆಯನ್ನು ಕಾಣುವಂತೆ, ಅದೇ ರೀತಿ ತಿರುಮಲೇಶ ಅವರ ಬರವಣಿಗೆಯೂ ಹೊಸ ರೀತಿಯಲ್ಲಿದೆ. ಮಕ್ಕಳ ಸಾಹಿತ್ಯವನ್ನು ಕನ್ನಡದ ನವೋದಯದ ಖ್ಯಾತ ಕವಿಗಳು ಬಳಸಿಕೊಂಡ ವಿಧಾನ, ಶೈಲಿ ಎಲ್ಲರ ಮೇಲೆಯೂ ಹೆಚ್ಚು ಪ್ರಭಾವವನ್ನು ಬಿರಿದೆ. ಹಾಗಾಗಿ ಮಕ್ಕಳ ಸಾಹಿತ್ಯದಲ್ಲಿ ಬರೆಯುವವರು ಆ ಮಿತಿಗಳನ್ನು ದಾಟಿ ಬರೆಯುವ ಸವಾಲಿದೆ ಎನ್ನನು ಮನೋಭಾವದ ತಿರುಮಲೇಶರ ಗುಣವನ್ನು ಗುರುತಿಸಿದಾಗ ಮಕ್ಕಳ ಸಾಹಿತ್ಯವನ್ನು ಎಷ್ಟು ಗಂಭೀರವಾಗಿ ಪರಿಗಣಿಸಿದ್ದರು ಎಂಬುದನ್ನು ತಿಳಿದುಬರುತ್ತದೆ. ಅದಕ್ಕೆ ಅವರು ಒಂದು ಕಡೆ ಹೇಳಿದ ಮಾತು

"ಮಕ್ಕಳ ಕವಿತೆಗೆಕನ್ನಡದಲ್ಲಿ
ಇಲ್ಲದಿದ್ದರೂಕೊರತೆ
ಬತ್ತಬಾರದುಅದರಒರತೆ"

ಎನ್ನುವ ಸಾಲುಗಳು ಆ ಗಂಭೀರತೆಗೆ ಸಾಕ್ಷಿಯಾಗಿವೆ. ಅವರು ಮಕ್ಕಳ ಸಾಹಿತ್ಯದ ಮೇಲಿಟ್ಟಿದ್ದ ವಿಶ್ವಾಸದ ದ್ಯೋತಕದಂತೆ ಈ ಸಾಲುಗಳು ಕಾಣಿಸುತ್ತವೆ.

ತಿರುಮಲೇಶ ಅವರು ಮಕ್ಕಳ ಸಾಹಿತ್ಯದಲ್ಲಿ ಕಾವ್ಯವನ್ನು ಮಾತ್ರ ಅಪ್ಪಿಕೊಂಡಿದ್ದಾರೆ. ಅಂದಾಜು ನಾಲ್ಕು ನೂರಕ್ಕೂ ಹೆಚ್ಚು ಕವನಗಳು ಅವರ ಆದಿಕಾವ್ಯ ಮಾಲಿಕೆ ಅಡಿಯಲ್ಲಿ ಹತ್ತು ಕೃತಿಗಳಲ್ಲಿ ಪ್ರಕಟವಾಗಿವೆ. "ಚಿಕ್ಕಣಿರಾಜ", "ಓಡೋ ಪುಟ್ಟಾಓಡೋ", "ಬೀಸಿದರೆ ಉದುರಬೇಕು ನಕ್ಷತ್ರ ಹೂ ಹಣ್ಣು", "ನಂಬಿ ಕೆಟ್ಟವರಿಲ್ಲ ಪುಟ್ಟನ", "ನಾನಿದ್ದೀನಲ್ಲಅಂತಾನ್ ಪುಟ್ಟ", "ನೆನೆ ಪುಟ್ಟ ನೆನೆ", "ಅಟ್ಟದಲ್ಲೇನಿದೆಯೋ ಪುಟ್ಟನಿಗೇಗೊತ್ತು", "ಇಂತಪ್ಪ ಪುಟ್ಟಈಗೆಲ್ಲಿ ಪುಟ್ಟ", "ಮೆಟ್ರೋದಲ್ಲಿ ಇಲಿ", "ಓ ಲಲ" ಎನ್ನುವ ಕೃತಿಗಳ ತುಂಬೆಲ್ಲಾ ಅವರ ಕವನಗಳು ತುಂಬಿಕೊಂಡಿವೆ.

ಕನ್ನಡದ ಶ್ರೇಷ್ಠ ಚಿಂತಕ ಡಿ.ವಿ.ಗುಂಡಪ್ಪ ಮತ್ತು ಹಾಸ್ಯ ಬ್ರಹ್ಮ ಬೀಚಿಯವರು ತಮ್ಮ ಸಾಹಿತ್ಯದಲ್ಲಿ ತಿಮ್ಮನನ್ನು ಮುನ್ನೆಲೆಗೆ ತಂದಿದ್ದಾರೆ. ಅದೇರೀತಿ ತಿರುಮಲೇಶ ಅವರು ತಮ್ಮ ಮಕ್ಕಳ ಸಾಹಿತ್ಯದ ಎಲ್ಲಾ ಕೃತಿಗಳಲ್ಲೂ 'ಪುಟ್ಟ'ನಿಗೆ ಮನ್ನಣೆ ನೀಡಿದ್ದಾರೆ. ಅವರನ್ನು ಬಾಲ್ಯದಲ್ಲಿ ಆ ಹೆಸರಿನಿಂದ ಕರೆಯುತ್ತಿದ್ದರ ಹಿನ್ನಲೆಯಲ್ಲಿ ತಾವೇ ಕಾವ್ಯದಲ್ಲಿ ಪುಟ್ಟನಾಗಿದ್ದಾರೆ. ಬರಹಗಾರನು ಮಕ್ಕಳ ಸಾಹಿತ್ಯ ರಚಿಸುವಾಗ ಮಗುವಾಗಬೇಕು, ಮಗುವಿನಲ್ಲಿ ಪರಕಾಯ ಪ್ರವೇಶ ಮಾಡಬೇಕು ಎನ್ನುವ ಮಾತಿಗೆ ಅನ್ವರ್ಥಕದಂತೆ ಇವರು ಕಾಣಿಸುತ್ತಾರೆ.

ಇವರ ಕವನಗಳಲ್ಲಿ ವಿಷಯ ವಸ್ತುಗಳು ಹಲವು ಬಗೆಯಲ್ಲಿವೆ. ಗ್ರಾಮೀಣ ಪ್ರದೇಶದ ಪರಿಸರ, ಮಕ್ಕಳ ಖುಷಿ, ಹಾಸ್ಯ, ತುಂಟತನ, ಆಟಗಳು, ಮನೋರಂಜನೆಗೆ ಆದ್ಯತೆ ನೀಡಿರುವುದು ಸ್ಪಷ್ಟವಾಗಿ ಕಾಣುತ್ತದೆ. ಕವನಗಳಲ್ಲಿ ಕುತೂಹಲವನ್ನು ಕಾಪಿಟ್ಟುಕೊಂಡಿರುವುದಲ್ಲದೇ ದೊಡ್ಡವರ ಕವನಗಳಂತೆ ಅತ್ಯಂತ ಸಣ್ಣ ಸಂಗತಿಗಳೂ ಇಲ್ಲಿ ಕವನದ ವಸ್ತುಗಳಾಗಿವೆ.

ಬೆಕ್ಕು ಬಂತು ಮಿಯಾಂ ಅಂತು
ಜೈಲಿಗಾಕಿದ್ರು
ನಾಯಿ ಬಂತು ಬೌ ಅಂತು
ಜೈಲಿಗಾಕಿದ್ರು
ಕುದುರೆ ಬಂತು ಹೇ ಅಂತು
ಜೈಲಿಗಾಕಿದ್ರು

ಹೀಗೆ ಸಾಗುವ ಪದ್ಯವು ಎಲ್ಲವನ್ನೂ ಜೈಲಿಗೆ ಹಾಕಿದರೆ ಹೇಗೆ? ಎಂದು ಯೋಚನೆ ಸಾಗುತ್ತಿರುವಾಗಲೆ ಅದಕ್ಕೊಂದು ಅಂತ್ಯವನ್ನು ಕುತೂಹಲದ ಜೊತೆಗೆ ವಾಸ್ತವಿಕ ಪ್ರಜ್ಞೆಯನ್ನು

ಎಲ್ಲಾ ಇಲ್ಲೆ ಇವೆಯಲ್ಲಾ?
ಇದೇ ಮತ್ತೆ ಜೈಲುಅಂದ್ರೆ

ಎನ್ನುವ ಮೂಲಕ ಪದ್ಯವು ವಿಭಿನ್ನ ಬಗೆಯಲ್ಲಿ ಅಂತ್ಯಗೊಳ್ಳುವುದು ಮಕ್ಕಳ ದೃಷ್ಟಿಯಲ್ಲಿ ವಿಭಿನ್ನ ಎನಿಸುತ್ತದೆ. ಇವತ್ತಿನ ಮಕ್ಕಳ ಸ್ಥಿತಿ ಎಲ್ಲಿಗೆ ಬಂದು ನಿಂತಿದೆ ಎನ್ನುವುದನ್ನು ವಿಡಂಬನಾತ್ಮಕವಾಗಿ ತಿರುಮಲೇಶ ಪದ್ಯದ ಮೂಲಕ ಹೇಳಿದ್ದಾರೆ.

ಅಕ್ಕಿ ಎಲ್ಲಿಂದ ಬಂತೋ ಪುಟ್ಟ
ಗೋಣಿ ಚೀಲ್ದಿಂದ
ಹಾಲು ಎಲ್ಲಿಂದ ಬಂತೋ ಪುಟ್ಟ
ಪ್ಲಾಸ್ಟಿಕ್ ಚೀಲ್ದಿಂದ
ಎಳನೀರು ಎಲ್ಲಿಂದ ಬಂತೋ ಪುಟ್ಟ
ಬೀದಿ ಕೊನೆಯಿಂದ
ತತ್ತಿ ಎಲ್ಲಿಂದ ಬಂತೋ ಪುಟ್ಟ
ಇಬ್ರಾಹಿಂನ ಅಂಗಡಿಯಿಂದ
ಉಳಿದಿದ್ದೆಲ್ಲವು ಎಲ್ಲಿಂದ
ಕೇಳೋದೆ ಬೇಡ

ಮಕ್ಕಳನ್ನು ಹಿರಿಯರು ಬೆಳೆಸುತ್ತಿರುವ ರೀತಿ ಮತ್ತು ಅವರಿಗೆ ನೀಡುತ್ತಿರುವ ಅನುಭವಗಳು ಯಾವ ರೀತಿಯಾಗಿವೆ. ಬದುಕಿನ ಪಾಠವನ್ನು ಕಟ್ಟಿಕೊಡುವಲ್ಲಿ ಆಧುನಿಕ ಸಮಾಜ ಎಡವುತ್ತಿದೆ ಎನ್ನುವುದನ್ನು ಕವಿ ಸೂಕ್ಷ್ಮವಾಗಿ ಈ ಕವನದಲ್ಲಿ ದಾಖಲಿಸಿದ್ದಾರೆ. ಮಕ್ಕಳ ಸಾಹಿತ್ಯ ಎಂದರೆ ಅದು ಹೆಚ್ಚಾಗಿ ನೀತಿಯನ್ನು ಸಾರಬೇಕು ಎನ್ನುವ ನಿಲುವನ್ನು ಸಂಪೂರ್ಣ ಹೊಡೆದು ಹಾಕಿ ಅದು ಮಕ್ಕಳಿಗೆ ಮುದ ನೀಡಬೇಕು ಎನ್ನುವ ಆಶಯವನ್ನು ಈ ಕವಿಯು ಹೆಚ್ಚು ಪ್ರತಿಪಾದಿಸುತ್ತಾರೆ. ಅದರಲ್ಲೂ ಮಕ್ಕಳಿಗೆ ಸಾಹಿತ್ಯವು ಖುಷಿಯನ್ನು ನೀಡಬೇಕು ಎನ್ನುವ ಹಂಬಲವೇ ಅವರ ಬರವಣಿಗೆಯುದ್ದಕ್ಕೂ ಕಾಣಬಹುದು.

ಎತ್ತಿಗೆ ಜ್ವರ ಬಂದ್ರೆ ಕೋಣನಿಗೆ ಬರೆ
ಎಳೀತಾರಲ್ಲೋ ಪುಟ್ಟಾ
ಎಳೀಲೇ ಬೇಕಲ್ಲಾ ಮತ್ತೆ,
ಎತ್ತನು ನೋಡಿ ನಗ್ತಾಇರತ್ತದು
ಅಂತಾನ್ ಪುಟ್ಟ

ಅಪ್ಪ ಹೋಗಿ ಇಪ್ಪತ್‌ದೋಸೆ
ತದ್ನಂತೆ,



ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

Scan For Digital Colourful
HAMPI TIMES E-paper

ಅದರಲ್ಲಿ ಐದು ಕೊಳೆತರೆ
ಇನ್ನೆಷ್ಟು ಅಂತ ಕೇಳಿದರೆ
ಅಯ್ಯೊಯ್ಯೋ! ಮೊದ್ಲೆ
ನಂಗೆ ಹೇಳ್ಬಾರ್ದಿತ್ತೆ
ಕೊಳೆಯೋಕ್ ನಾ
ಬಿಡ್ತಿದ್ನಾ?
ಅಂತಾನ್ ಪುಟ್ಟ
ಮಂಗನ ಕೈಗೆ
ಮಾಣಿಕ್ಯಕೊಟ್ಟರೆ
ಏನಾಗುತ್ತೋ ಪುಟ್ಟಾ?
ಮಾರ್ಕೆಟ್ಗೋಗಿ ಮಾರುತ್ತೆ
ಆಮೇಲೆ ಮಾಳ್ಗಿ ಮನೇಲಿ
ಸುಕ್ವಾಗಿರುತ್ತೆ
ಅದು ಹ್ಯಾಂಗೋ ಪುಟ್ಟ?
ಅದು ಮಾರ್ಡನ್ ಮಂಗ
ಅದಕ್ಕೇ.

ಎಣಿಸೋಕಾಗತ್ತಾ ಮರದಲಿ
ಎಲೆಗಳು ಎಷ್ಟಿವೆ ಅಂತ



ಆಗಲ್ಲ
ಎಣಿಸೋಕಾಗತ್ತಾ ಆಕಾಶದಲ್ಲಿ
ತಾರೆಗಳೆಷ್ಟಿವೆ ಅಂತ
ಆಗಲ್ಲ
ಹಾಗಾದ್ರೆ ಈ ಲೆಕ್ಕ ಕಲಿತು ಬಂತೇನಂತ
ಕೆಳಗಿಡ್ತಾನೆ ಪುಟ್ಟ
ಲೆಕ್ಕದ ಪುಸ್ತ.

ಈ ರೀತಿ ಆಧುನಿಕತೆಯನ್ನು ಮೇಳೈಸುತ್ತಲೇ ಮಕ್ಕಳಿಗೆ ಮುದ ನೀಡುವಂತ ಕವನಗಳನ್ನು ಅವರ ಬರಹದಲ್ಲಿ ವಿಶೇಷವಾಗಿ ಗಮನ ಸೆಳೆಯುತ್ತವೆ. ಇಂತಹ ಕವನಗಳು ಮಕ್ಕಳಿಗೆ ಪ್ರಿಯವಾಗುವುದರ ಜೊತೆಗೆ ಸದಾ ಕಾಡುವಲ್ಲಿ ಯಶಸ್ವಿಯಾಗುತ್ತವೆ.

ಹಾಸ್ಯ ಮತ್ತು ಆಡು ಭಾಷೆಯ ಮೂಲಕ ಮಕ್ಕಳ ಮನಸ್ಸನ್ನು ನೇರವಾಗಿ ಪ್ರವೇಶಿಸಬಹುದು ಎನ್ನುವುದನ್ನು ಜಿ.ಪಿ.ರಾಜರತ್ನಂ ನಂತರ ತಿರುಮಲೇಶ ಅವರು ಸ್ಪಷ್ಟವಾಗಿ ಅರಿತು, ಆ ನೀಟ್ಟಿನಲ್ಲಿಯೇ ಕಾವ್ಯ ರಚಿಸಿರುವುದು ಅವರ ಕವನಗಳಲ್ಲಿ ನೋಡಬಹುದು. ಅವರ ಬರವಣಿಗೆಯ ಶೈಲಿಯು ಜನಪದದ ಮಾದರಿಯಂತೆ ಕಂಡು ಬಂದರೂ ಅದರಲ್ಲಿ 21ನೇ ಶತಮಾನದ ಮಕ್ಕಳಿಗೆ ಅಗತ್ಯತೆಯನ್ನು ತುಂಬಿ ಕೊಡುವಲ್ಲಿ ಯಶಸ್ವಿಯಾಗಿದೆ ಎನ್ನಬಹುದು. ಮಕ್ಕಳ ಸಾಹಿತ್ಯದಲ್ಲಿ ಹೊಸತನಕ್ಕೆ ಅವರು ಕೈ ಹಾಕಿರುವುದು ಈ ಮೂಲಕ ವೇದ್ಯವಾಗುತ್ತದೆ. "ತಿರುಮಲೇಶರ ಈ ತೆರನಾದ ವ್ಯಾಪಕ ಬರವಣಿಗೆಯ ಹಿಂದಿರುವುದು ಕನ್ನಡದ ಪ್ರೀತಿಯೊಂದೇ, ಸದಾ ಹೊರನಾಡಿನಲ್ಲಿದ್ದು ಇಷ್ಟು ವ್ಯಾಪಕವಾಗಿ ಬರೆದವರಲ್ಲಿ ಕನ್ನಡದ ಮಟ್ಟಿಗೆ ತಿರುಮಲೇಶರೇ ಪ್ರಮುಖರೇನೊ"ಎನ್ನುವ ಮಾತು ಇತರೆ ಸಾಹಿತ್ಯದಂತೆ ಅವರ ಮಕ್ಕಳ ಸಾಹಿತ್ಯಕ್ಕೂ ಅನ್ವಯಿಸುತ್ತದೆ.

ಮಕ್ಕಳ ಸಾಹಿತ್ಯ ಕ್ಷೇತ್ರ ಇಂದು ಹೊಸತನಕ್ಕೆ ತನ್ನನ್ನು ತೆರೆದುಕೊಳ್ಳಬೇಕು ಎನ್ನುವ ಮಾತು ಮತ್ತೆ ಮತ್ತೆ ಮುನ್ನೆಲೆಗೆ ಬರುತ್ತಿದೆ. ಅಪ್ಪ ಹಾಕಿದ ಆಲದ ಮರ ಎಂದು ಮತ್ತೆ ಮತ್ತೆ ಹಿಂದಿನದಕ್ಕೆ ಜೋತು ಬೀಳುವ ಬದಲು, ಹೊಸ ಹೊಸ ಪ್ರಯತ್ನಗಳು ಅಗತ್ಯವಾಗಿವೆ. ಬರಹಗಾರರು ಇಂಗ್ಲಿಷ್‌ನಲ್ಲಿ ನಡೆಯುವ ಹೊಸ ರೀತಿಯ ಬರವಣಿಗೆಗಳನ್ನು ಗ್ರಹಿಸಬೇಕು. ಅಂತಹ ವಿನೂತನ ಪ್ರಯತ್ನಗಳಿಗೆ ನಾಂದಿ ಹಾಡುವ ನಿಟ್ಟಿನಲ್ಲಿ ಸಾಗಬೇಕಾದ ಅನಿವಾರ್ಯತೆ ಇಂದು ಕಾಣುತ್ತಿದ್ದೇವೆ. ಈ ಕುರಿತು ತಿರುಮಲೇಶ ಅವರು ಉಳಿದವರಿಗಿಂತ ಒಂದು ಹೆಜ್ಜೆ ಮುಂದೆ ಸಾಗಿದ್ದಾರೆ ಎನ್ನಬಹುದು. ಮಕ್ಕಳ ಸಾಹಿತ್ಯದ ಇಂದಿನ ಬರಹಗಾರರಿಗೆ ಹೊಸ ದಾರಿಯನ್ನು ವಿಭಿನ್ನ ಬಗೆಯಲ್ಲಿ ತೋರಿಸಿಕೊಡುವ ಮೂಲಕ ತಿರುಮಲೇಶ ಅವರು ಮಕ್ಕಳ ಸಾಹಿತ್ಯ ಕ್ಷೇತ್ರದ ವಿಶೇಷ ನಕ್ಷತ್ರವಾಗಿ ಕಾಣುತ್ತಿದ್ದಾರೆ.

ಮಕ್ಕಳ ಸೂಕ್ಷ್ಮ ಮನಸ್ಸಿನ ಬಾಗಿಲನ್ನು ತಟ್ಟುವುದು ಸುಲಭದ ಮಾತಲ್ಲ. ಅದು ಹೆಚ್ಚು ಪರಿಶ್ರಮವನ್ನು ಬೆಡುತ್ತದೆ. ಅದರಲ್ಲಿನ ಗಟ್ಟಿತನದ ಪ್ರಶ್ನೆಯೂ ಸದಾ ಚರ್ಚೆಗೆ ಒಳಪಡುತ್ತಲೇ ಇದೆ. ಅದರ ಜೊತೆಗೆ ಮಕ್ಕಳ ಆಸಕ್ತಿ, ಪ್ರೀತಿ, ಮುಗ್ಧತೆ, ಹಾಸ್ಯ, ಕುತೂಹಲಕ್ಕೆ ಪೂರಕವಾಗಿ ಬರವಣಿಗೆಯು ಸ್ಪಂದಿಸಿದರೆ ಅದು ಕುವೆಂಪು, ಪಂಜೆ, ಸಿದ್ದಯ್ಯ ಪುರಾಣಿಕ, ರಾಜರತ್ನಂ, ತಿರುಮಲೇಶರವರ ಸಾಹಿತ್ಯದಂತೆ ಹೆಚ್ಚು ಕಾಲ ಉಸಿರಾಡುತ್ತದೆ. ಇದು ಇಂದು ಮಕ್ಕಳ ಸಾಹಿತ್ಯದಲ್ಲಿ ಆಗಬೇಕಾದ ಅತೀ ತುರ್ತಿನ ಕೆಲಸವೂ ಹೌದು.

### ಮುಖ್ಯಮಂತ್ರಿ ಸಿದ್ದರಾಮಯ್ಯ ಪಿಎಂ ವಿರುದ್ಧ ವಾಗ್ದಾಳಿ

# ಬೆಲೆಯೇರಿಕೆ, ನಿರುದ್ಯೋಗ, ರೈತರ ಬಗ್ಗೆ ಪ್ರಧಾನಿ ಚರ್ಚಿಸಲ್ಲ

**ವಿಜಯಪುರ:** ಬೆಲೆಯೇರಿಕೆ, ನಿರುದ್ಯೋಗ, ರೈತರ ಸಂಸ್ಥೆಗಳ ಬಗ್ಗೆ ಪ್ರಧಾನಿಗಳು ಚರ್ಚೆ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವತಿಯಿಂದ ವಿಜಯಪುರ ನಗರದಲ್ಲಿ ಆಯೋಜಿಸಲಾಗಿದ್ದ ಪ್ರಜಾಧ್ವನಿ –02 ಲೋಕಸಭಾ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಿ ತಮ್ಮ ಪಕ್ಷದ ಅಭ್ಯರ್ಥಿಯಾದ ರಾಜು ಹಲಗೂರು ರವರ ಪರವಾಗಿ ಶುಕ್ರವಾರ ಮಾತಾಯಾಚನೆ ಮಾಡಿ ಮಾತನಾಡಿದರು.

ನರೇಂದ್ರ ಮೋದಿಯವರು ಹತ್ತು ವರ್ಷ ಪ್ರಧಾನಿಯಾಗಿ ಬಡವರು, ಯುವಕರು,ದಲಿತರು ಅಲ್ಪಸಂಖ್ಯಾತ ಪರವಾಗಿ ಕೆಲಸ ಮಾಡಿಲ್ಲ. ಬೆಲೆಯೇರಿಕೆ, ನಿರುದ್ಯೋಗ, ರೈತರ ಸಂಸ್ಥೆಗಳ ಬಗ್ಗೆ ಪ್ರಧಾನಿಗಳು ಚರ್ಚೆ ಮಾಡುವುದಿಲ್ಲ. ಅವರು ಸಾಧನೆಗಳನ್ನು ಹೇಳದೆ ಭಾವನೆಗಳನ್ನು ಕೆರಳಿಸಿ, ಧರ್ಮ ಧರ್ಮಗಳ ನಡುವೆ, ಜಾತಿಗಳ ನಡುವೆ ಬೆಂಕಿ ಇಡುವ ಕೆಲಸಗಳನ್ನು ಮಾಡಿದ್ದಾರೆ. ಇತ್ತೀಚಿನ ಅವರ ಭಾಷಣಗಳನ್ನು ಗಮನಿಸಿದರೆ ಮೊದಲಹಂತದ ಚುನಾವಣೆಯಲ್ಲಿ ಅವರು ನಿರೀಕ್ಷಿಸಿದ ಮತಗಳು ಬರುವುದಿಲ್ಲ ಎಂದು ಅವರು ಹತಾಶರಾಗಿದ್ದಾರೆ. ಸಂಬಂಧಪಡದ ಅನೇಕ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದಾರೆ ಎಂದರು

**ಧೃವೀಕರಣ ಮಾಡುವ ಪ್ರಯತ್ನ :** ಸಂವಿಧಾನದ 15 ಮತ್ತು 16 ನೇ ಕಲಂ ನಲ್ಲಿ ಸ್ಪಷ್ಟವಾಗಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡಬೇಕೆಂದು ಹೇಳಲಾಗಿದೆ. ಅದರಲ್ಲಿ ಹಿಂದೂಗಳು ಹಾಗೂ ಮುಸಲ್ಮಾನರು, ಕ್ರಿಶ್ಚಿಯನ್ ಹಾಗೂ ಎಲ್ಲಾ ಜನರೂ ಬರುತ್ತಾರೆ. ಮುಸಲ್ಮಾನರಿಗೆ ಮೀಸಲಾತಿ ಕೊಡಲಾಗುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಅವರು ಸಂವಿಧಾನದ ವಿರುದ್ಧವಾಗಿ ಮಾತನಾಡುತ್ತಿದ್ದಾರೆ. ಹಿಂದೂಗಳ ಮೀಸಲಾತಿಯನ್ನು ಕಿತ್ತು ಮುಸಲ್ಮಾನರಿಗೆ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಒಬ್ಬ ಪ್ರಧಾನಮಂತ್ರಿಯಾಗಿ ಈ ರೀತಿ ಮಾತುಗಳನ್ನಾಡುವುದು ಅವರ ಸ್ಥಾನಕ್ಕೆ ಚ್ಯುತಿ ತರುವ ಕೆಲಸ ಎಂದರು.

1977ನಲ್ಲಿಯೇ ಹಾವನೂರು ಆಯೋಗ ಅಲ್ಪಸಂಖ್ಯಾತರಿಗೆ ಮೀಸಲಾತಿ ಕೊಡಬೇಕೆಂದು ಶಿಫಾರಸ್ಸು ಮಾಡಿದೆ. ಚಿನ್ನಪ್ಪ ರೆಡ್ಡಿ ಆಯೋಗವೂ ಇದನ್ನೇ ಶಿಫಾರಸು ಮಾಡಿದೆ. 2004 ನಲ್ಲಿ ಕರ್ನಾಟಕದಲ್ಲಿ ಮುಸಲ್ಮಾನರಿಗೆ ಮೀಸಲಾತಿಯನ್ನು 2 ಬಿ ಅಡಿಯಲ್ಲಿ ಪ್ರಾರಂಭಿಸಲಾಯಿತು. 4% ಮೀಸಲಾತಿಯನ್ನುಕೊಡಲುಪ್ರಾರಂಭಿಸಲಾಯಿತು. 94 ರಿಂದ ಈವರೆಗೆ ಮೀಸಲಾತಿ ಹಾಗೆ ಉಳಿದುಕೊಂಡು ಬಂದಿದೆ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ಮುಸಲ್ಮಾನರ 4% ಮೀಸಲಾತಿಯನ್ನು ತೆಗೆದುಹಾಕಿದರು. ಅದರ ವಿರುದ್ಧ ಮುಸಲ್ಮಾನ ಮುಖಂಡರು ಸುಪ್ರೀಂ ಕೋರ್ಟ್ ನಲ್ಲಿ ಅರ್ಜಿ ಹಾಕಿ, ಬಿಜೆಪಿಯವರು ಅಫೊಡವಿಟ್ ಹಾಕಿ ಯಥಾಸ್ಥಿತಿ ಮುಂದುವರೆಸುತ್ತೇವೆ ಎಂದು ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ. ನರೇಂದ್ರ ಮೋದಿಯವರು ಮೀಸಲಾತಿ ನೀಡುತ್ತಿರುವುದು ಸಂವಿಧಾನ ಬಾಹಿರ ಎಂಬಂತೆ ಮಾತನಾಡುತ್ತಿರುವುದು ಆಶ್ಚರ್ಯವನ್ನುಂಟು ಮಾಡುತ್ತಿದೆ. ಧೃವೀಕರಣ ಮಾಡುವ ಪ್ರಯತ್ನ ಇದು. ಸುಪ್ರೀಂ ಕೋರ್ಟ್ ಆದೇಶದ ನಂತರ ಹಿಂದೆ ಅವರೇ ಮುಂದುವರೆಸಿ ಈಗ ಹೊಸದಾಗಿ ಕೊಡಲಾಗುತ್ತಿದೆ ಎಂದು ಹೇಳುತ್ತಿರುವುದು ಅತ್ಯಂತ ದೊಡ್ಡ ಸುಳ್ಳು. ನರೇಂದ್ರ ಮೋದಿಯವರು ಸುಳ್ಳು ಹೇಳುವುದರಲ್ಲಿ ಪ್ರವೀಣರು. ಸ್ವತಂತ್ರ ಭಾರತದಲ್ಲಿ ಆಗಿ ಹೋದ ಪ್ರಧಾನಮಂತ್ರಿಗಳ ಪೈಕಿ ಅತಿ ಹೆಚ್ಚು ಸುಳ್ಳು ಹೇಳುವುದು ನರೇಂದ್ರ ಮೋದಿಯವರು ಎಂದರು. ಸೋಲುವ ಹತಾಶೆಯಿಂದ ಹೇಳಿರುವುದೇ ಹೊರತು ಯಾವುದೇ ಸಂವಿಧಾನಾತ್ಮಕ ಅಂಶಗಳಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದ ಜನ ಬಿಜೆಪಿಜಿ ಮತ ಹಾಕಿ 25 ಜನರನ್ನು ಆಯ್ಕೆ ಮಾಡಿದರು. ಆಯ್ಕೆ ಆಗಿರುವ ಯಾವೊಬ್ಬ ಸಂಸದರೂ ಕರ್ನಾಟಕಕ್ಕೆ ಅನ್ಯಾಯದ ಬಗ್ಗೆ ಬಾಯಿ ಬಿಡಲಿಲ್ಲ . ರಾಜ್ಯದ ಹಿತ ಕಾಪಾಡದವರು ಲೋಕಸಭೆಗೆ ಹೋದರೆ ಪ್ರಯೋಜನವಿಲ್ಲ ಎಂದರು.

**ಭರವಸೆ ಈಡೇರಿಸದ ಮೋದಿ :** ನರೇಂದ್ರ ಮೋದಿಯವರು 2014ರ ನೀಡಿದ್ದ ಭರವಸೆಗಳನ್ನು ನೆನೆಸಿಕೊಳ್ಳಬೇಕು. ವಿದೇಶದಿಂದ ಕಪ್ಪು ಹಣ ತಂದು ಪ್ರತಿಯೊಬ್ಬರಿಗೂ 15 ಲಕ್ಷ ಬರಲಿಲ್ಲ, ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಯಾಗಲಿಲ್ಲ ರೈತರ ಆದಾಯ ದುಪ್ಪಟ್ಟು ಆಗಲಿಲ್ಲ, ಅಗತ್ಯ ವಸ್ತುಗಳ ಬೆಲೆ ಕಡಿಮೆಯಾಗಲಿಲ್ಲ. ಅಚ್ಚೇ ದಿನ್ ಬರಲಿಲ್ಲ ಎಂದು ವಿವರಿಸಿದರು.